## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 307 |
| 2 ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 ಉತ್ತರಿಸುವ ದಿನಾಂಕ | : | 15-02-2024 |
| 4 ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಆಸ್ತಿಗಳೆಷ್ಟು; ಈ ಪೈಕಿ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳ ಸಂಖ್ಯೆ ಎಷ್ಟು; ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಗುತ್ತಿರುವ ನಷ್ಟ ಎಷ್ಟು; ಈ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಕೈಗೊಂಡಿರುವ ಕ್ರಮಗಳೇನು; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಂದಾಜು **20,43,742** ಗಳಷ್ಟು ಆಸ್ತಿಗಳಿರುತ್ತದೆ.<br><br>ಈ ಪೈಕಿ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳನ್ನು ಪತ್ತೆ ಹಚ್ಚಿ ತೆರಿಗೆ ವ್ಯಾಪ್ತಿಗೆ ತರಲು ಸ್ವತ್ತುಗಳನ್ನು ಕಾಲಕಾಲಕ್ಕೆ ಸರ್ವೆ ಮುಖಾಂತರ ಗುರುತಿಸಿ ಸದರಿ ಸ್ವತ್ತಿನ ಮಾಲೀಕರಿಗೆ ಡಿಮ್ಯಾಂಡ್ ನೋಟೀಸ್ ನೀಡಿ ವಸೂಲಾತಿಗೆ ಕ್ರಮಕೈಗೊಳ್ಳಲಾಗುತ್ತಿರುತ್ತದೆ. |
| ಆ | ಕಳೆದ 5 ವರ್ಷದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವಸೂಲಾಗದ ಆಸ್ತಿಗಳೆಷ್ಟು ಆಸ್ತಿ ತೆರಿಗೆ ವಸೂಲಿಗೆ ಕೈಗೊಂಡಿರುವ ಕ್ರಮಗಳೇನು; | ಕಳೆದ 5 ವರ್ಷದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವಸೂಲಾಗದ ಆಸ್ತಿಗಳು ಅಂದಾಜು 1,67,054 ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸ್ವತ್ತುಗಳಿಗೆ ನೋಟಿಸ್ ಜಾರಿ ಮಾಡಿ 30 ದಿನದ ಕಾಲಾವಕಾಶದ ನಂತರ ಬಾಕಿ ತೆರಿಗೆ ಪಾವತಿಸದೇ ಇದ್ದಲ್ಲಿ ಸದರಿ ಆಸ್ತಿಯನ್ನು ಬಿಬಿಎಂಪಿ ಕಾಯ್ದೆ ಅನ್ವಯ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿದೆ ಹಾಗೂ ಸದರಿ ಆಸ್ತಿಗಳ ಋಣಭಾರ ಪತ್ರದಲ್ಲಿ ಆಸ್ತಿ ತೆರಿಗೆ ಬಾಕಿಯ ಬಗ್ಗೆ ನಮೂದಿಸಲು ಸಬ್ ರಿಜಿಸ್ಟರ್ ರವರಿಗೆ ಮುಟ್ಟುಗೋಲು ಆದೇಶದ ಪ್ರತಿಯೊಂದಿಗೆ ಕ್ರಮಕೈಗೊಳ್ಳಲು ತಿಳಿಸಲಾಗುತ್ತಿದೆ. |
| ಇ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪ್ರತಿಷ್ಠಿತ ಮಾಲ್‌ಗಳು ತೆರಿಗೆ ಬಾಕಿ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳು ಯಾವುವು; ವಸೂಲಾಗಬೇಕಿರುವ ತೆರಿಗೆ ಬಾಕಿ ಮೊತ್ತ ಎಷ್ಟು; ತೆರಿಗೆ ಬಾಕಿ ವಸೂಲಿಗೆ ಕೈಗೊಂಡಿರುವ ಕ್ರಮಗಳೇನು; | ಹೌದು. ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳಿಂದ ವಸೂಲಾಗಬೇಕಿರುವ ಬಾಕಿ ಮೊತ್ತ ರೂ.99,63,57,959/-ಗಳು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸ್ವತ್ತುಗಳಿಗೆ ನೋಟಿಸ್ ಜಾರಿ ಮಾಡಿ 30 ದಿನದ ಕಾಲಾವಕಾಶದ ನಂತರ ಬಾಕಿ ತೆರಿಗೆ ಪಾವತಿಸದೇ ಇದ್ದಲ್ಲಿ ಸದರಿ ಆಸ್ತಿಯನ್ನು ಬಿಬಿಎಂಪಿ ಕಾಯ್ದೆ ಅನ್ವಯ ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮವಹಿಸಲಾಗುತ್ತಿದೆ ಹಾಗೂ ಸದರಿ ಆಸ್ತಿಗಳ ಋಣಭಾರ ಪತ್ರದಲ್ಲಿ ಆಸ್ತಿತೆರಿಗೆ ಬಾಕಿಯ ಬಗ್ಗೆ ನಮೂದಿಸಲು ಸಬ್ ರಿಜಿಸ್ಟರ್ ರವರಿಗೆ ಮುಟ್ಟುಗೋಲು ಆದೇಶದ ಪ್ರತಿಯೊಂದಿಗೆ ಕ್ರಮಕೈಗೊಳ್ಳಲು ತಿಳಿಸಲಾಗುತ್ತಿದೆ. |

...2/

| | | |
|---|---|---|
| ಈ | ತೆರಿಗೆ ವಸೂಲಿ ಸಂಬಂಧ ನ್ಯಾಯಾಲಯದಲ್ಲಿರುವ ಪ್ರಕರಣಗಳು ಎಷ್ಟು: ಕೆಲವು ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಸರ್ಕಾರಕ್ಕೆ ಹಿನ್ನಡೆ ಆಗಲು ಕಾರಣಗಳೇನು? | ತೆರಿಗೆ ವಸೂಲಿ ಸಂಬಂಧ ಪಾಲಿಕೆಯಿಂದ ನೀಡಲಾದ ನೋಟೀಸ್/ಆದೇಶಗಳನ್ನು ಪ್ರಶ್ನಿಸಿ ವಿವಿಧ ನ್ಯಾಯಾಲಯದಲ್ಲಿ ದಾಖಲಾಗಿ ವಿಚಾರಣಾ ಹಂತದಲ್ಲಿರುವ ಒಟ್ಟು ಪ್ರಕರಣಗಳ ಸಂಖ್ಯೆ:154.<br><br>ದಾಖಲಾಗಿರುವ ಕೆಲವು ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ಪಾಲಿಕೆಗೆ ಆದೇಶ ಹೊರಡಿಸಿ,ಅರ್ಜಿದಾರರಿಗೆ ಸೂಕ್ತ ಕಾಲಾವಕಾಶ ನೀಡಿರುವುದಿಲ್ಲವೆಂದು ಹಾಗೂ ಅವರ ಉಪಸ್ಥಿತಿಯಲ್ಲಿ ಕಟ್ಟಡ/ನಿವೇಶನವನ್ನು ಅಳತೆ ಮಾಡದೇ ಕಂದಾಯ ವಿಧಿಸುತ್ತಿರುವುದಾಗಿ ತಿಳಿಸಿ, ಮರುಪರಿಶೀಲನೆಗೆ ಆದೇಶಿಸಲಾಗಿರುತ್ತದೆ. ಆದ್ದರಿಂದ ಇಂತಹ ಆದೇಶಗಳು ಪಾಲಿಕೆಗೆ ಹಿನ್ನಡೆಯಾಗಿರುವುದಿಲ್ಲ ಪುನರ್ ಪರಿಶೀಲಿಸಲು ಅವಕಾಶ ನೀಡಿರುವುದರಿಂದ, ಅರ್ಜಿದಾರರಿಗೆ ಪುನಃ ನೋಟೀಸ್/ಆದೇಶ ಜಾರಿ ಮಾಡಿ, ಕಂದಾಯ ವಸೂಲಿ ಮಾಡಲು ಕ್ರಮವಹಿಸಲಾಗುತ್ತಿರುತ್ತದೆ.<br><br>ಬಿಬಿಎಂಪಿ ಕಾಯ್ದೆ ಅಡಿಯಲ್ಲಿ ಶೇ.50ರಷ್ಟು ಡಿಮ್ಯಾಂಡ್ ಮೊತ್ತವನ್ನು ಪಾವತಿ ಮಾಡಿ, ಮಾನ್ಯ ಕರ್ನಾಟಕ ಮೇಲ್ಮನವಿ ನ್ಯಾಯ ಮಂಡಳಿಯಲ್ಲಿ ಮೇಲ್ಮನವಿಗೆ ಅವಕಾಶವಿರುವುದರಿಂದ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗುವ ಕೆಲವೊಂದು ಪ್ರಕರಣಗಳಲ್ಲಿ ಶೇ.50ರಷ್ಟು ಮೊತ್ತವನ್ನು ಪಾವತಿಸಿ, ಮೇಲ್ಮನವಿ ಸಲ್ಲಿಸಿಕೊಳ್ಳಲು ನಿವೇಶನ/ಕಟ್ಟಡದ ಮಾಲೀಕರಿಗೆ ನಿರ್ದೇಶಿಸಿ, ಪ್ರಕರಣಗಳನ್ನು ಇತ್ಯರ್ಥಗೊಳಿಸುತ್ತಿರುವುದರಿಂದ, ಬಿಬಿಎಂಪಿಗೆ ಹಿನ್ನಡೆಯಾಗಿರುವುದಿಲ್ಲ. |

ಸಂಖ್ಯೆ: ನಅಇ 51 ಬಿಬಿಎಸ್ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ.